ನಿಮ್ಮ ನಡುವೆ ಅತ್ಯಂತ ಒಳ್ಳೆಯ ನಡವಳಿಕೆ, ಸದಾಚರಣೆಯ ವಿಷಯದಲ್ಲಿ ಪರಸ್ಪರ ಪೈಪೋಟಿಯನ್ನು ಪ್ರೋತ್ಸಾಹಿಸಲು ಆಕಾಶಗಳು ಮತ್ತು ಭೂಮಿಯನ್ನು ಸೃಷ್ಟಿಸಿದವನೇ ಅವನು

ಹಜ್ ಫಂಡ್ ಆಫ್ ಇಂಡಿಯಾಟಿಎಮ್

ಸ್ಥಾಪಕರು ಮತ್ತು ನಿರ್ವಾಹಕರು **ಝಕಾತ್ ಫೌಂಡೇಶನ್ ಆಫ್ ಇಂಡಿಯಾ®**

ಝಕಾತ್ ಹೌಸ್, ಡಿ-2, ಓಖಲಾ ವಿಹಾರ್, ಜಾಮಿಯಾ ನಗರ್, ಹೊಸ ದೆಹಲಿ 110025 (ಭಾರತ).

hajfundofindia@zakatindia.org ● www.zakatindia.org/HajFund.html

**ಕಾರ್ಯನೀತಿ ಹೇಳಿಕೆ**

1. ಹಜ್ ಫಂಡ್ ಆಫ್ ಇಂಡಿಯಾದಲ್ಲಿ, ಭಾರತೀಯ ಮುಸಲ್ಮಾನರಾದ ಯಾರಾದರೂ ತಮ್ಮ ಹೆಸರಿನಲ್ಲಿ ಅಥವಾ ಬೇರೆ ಇತರ ಭಾರತೀಯ ಮುಸಲ್ಮಾನರ ಹೆಸರಿನಲ್ಲಿ, ವಯಸ್ಸು ಅಥವಾ ಲಿಂಗವನ್ನು ಅಥವಾ ಅಂತಹ ಯಾವುದೇ ವ್ಯಕ್ತಿಯ ಯಾವುದೇ ಇತರ ಗುರುತನ್ನು ಗಮನಿಸದೆ ಒಂದು ಹಜ್ ಖಾತೆ ತೆರೆಯುವುದನ್ನು ಸ್ವಾಗತಿಸಲಾಗುತ್ತದೆ.

ವಿವರಣೆ: ಈ ಲೇಖನದಲ್ಲಿ, 'ಭಾರತೀಯ' ಎಂಬ ಶಬ್ದವು ಸಾಮಾನ್ಯ ಭಾರತೀಯ ಕಾನೂನಿನ ಅನ್ವಯ ಅನಿವಾಸಿ ಭಾರತೀಯ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

2. ಯಾವ ವ್ಯಕ್ತಿಯ ಹೆಸರಿನಲ್ಲಿ ಹಜ್ ಖಾತೆಯನ್ನು ತೆರೆಯಲಾಗುತ್ತದೆಯೋ ಅಂತಹ ವ್ಯಕ್ತಿಯನ್ನು ಹಜ್ ಅಕೌಂಟ್ ಹೋಲ್ಡರ್ (ಎಚ್ಎಎಚ್) ಎಂದು ಕರೆಯಲಾಗುತ್ತದೆ.

3. ಹಜ್ ಖಾತೆಯಲ್ಲಿ ಹಣ ಜಮಾ ಮಾಡುವಂತಹ (ಎಚ್ಎಎಚ್ ಆಗಿರದ) ಒಬ್ಬ ವ್ಯಕ್ತಿಯನ್ನು ಹಜ್ ಅಕೌಂಟ್ ಡೆಪಾಸಿಟರ್ (ಎಚ್ಎಡಿ) ಎಂದು ಕರೆಯಲಾಗುತ್ತದೆ.

4. ಒಬ್ಬ ಎಚ್ಎಎಚ್ ಅಥವಾ ಎಚ್ಎಡಿ ರೂಗಳು. 1,000/ (ಒಂದು ಸಾವಿರ ರೂಪಾಯಿಗಳು) ಅಥವಾ ಹೆಚ್ಚು ಮೊತ್ತವನ್ನು ಜಮಾ ಮಾಡಿ ಒಂದು ಹಜ್ ಖಾತೆಯನ್ನು ತೆರೆಯಬಹುದು.

5. ಎಚ್ಎಎಚ್ ಅಥವಾ ಎಚ್ಎಡಿ ಆಯ್ಕೆಯ ಪ್ರಕಾರ ಒಂದು ಹಜ್ ಖಾತೆಯಲ್ಲಿ 1,000/-, 2,000/- 3,000/-, 4,000, 5,000/- ಅಥವಾ ರೂಗಳು. 1,000/- ದ ಅಪವರ್ತ್ಯವಾಗಿರುವ ಯಾವುದೇ ಮೊತ್ತವನ್ನು ನಿಯತವಾಗಿ (ಪ್ರತಿ ತಿಂಗಳಿಗೆ ಆದ್ಯತೆ) ಜಮಾ ಮಾಡಬಹುದು.

6. ಹಜ್ ಖಾತೆಯಲ್ಲಿ ರೂಗಳು. 101,000 (ಪ್ರಸ್ತುತದ ಬೆಲೆ ಸೂಚ್ಯಂಕ, ಎಚ್ಎಎಚ್ ಮೂಲಕ ಹಜ್ ಮಾಡಲು ಬೇಕಾಗುವ ಕನಿಷ್ಠ ಮೊತ್ತದಂತಹ ಅಂಶಗಳನ್ನು ಆಧರಿಸಿ ಈ ಮೊತ್ತವನ್ನು ಝೆಡ್ಎಫ್ಐನ ಬೋರ್ಡ್ ಆಫ್ ಟ್ರಸ್ಟೀಗಳು ತಮ್ಮ ವಿವೇಚನೆಯ ಮೇರೆಗೆ ಬದಲಿಸಬಹುದು) ಅಥವಾ ಹೆಚ್ಚು ಮೊತ್ತ ಕ್ರೆಡಿಟ್ ಆದ ನಂತರ ಒಬ್ಬ ಎಚ್ಎಎಚ್ ಕನಿಷ್ಠ ಮೊತ್ತ ರೂಗಳು. 1,000/ ವನ್ನು ತಮ್ಮ ಹಜ್ ಖಾತೆಯಲ್ಲಿ ಬಿಟ್ಟು ಹಜ್ ಮಾಡುವ ಉದ್ದೇಶಕ್ಕಾಗಿ ರೂಗಳು. 1,00,000/- (ರೂಗಳು ಒಂದು ಲಕ್ಷ ಅಥವಾ ಒಂದು ನೂರು ಸಾವಿರ) ಅಥವಾ ಹೆಚ್ಚು (ಕೇಸ್ ಪ್ರಕಾರವಾಗಿ) ಮೊತ್ತವನ್ನು ತಮ್ಮ ಹಜ್ ಖಾತೆಯಿಂದ ತೆಗೆದುಕೊಳ್ಳಲು ಮುಕ್ತರಾಗಿರುತ್ತಾರೆ.

* ಝಕಾತ್ ಫೌಂಡೇಶನ್ ಆಫ್ ಇಂಡಿಯಾದಿಂದ 'ಹಜ್ ಫಂಡ್ ಆಫ್ ಇಂಡಿಯಾ' ಟ್ರೇಡ್‌ಮಾರ್ಕ್ ಪಡೆದಿದೆ.

**ಹಜ್ ಫಂಡ್ ಆಫ್ ಇಂಡಿಯಾಟಿಎಮ್**

7. ಆ ಸಮಯದಲ್ಲಿ, ಎಚ್ಎಎಚ್ ಆ ರೀತಿ ಎಚ್ಎಫ್ಐ ಸಕ್ರಮ ಕಾರ್ಯವಿಧಾನಗಳ ಮೂಲಕ ಇಚ್ಛಿಸಿದರೆ, ಎಚ್ಎಎಚ್‌ಗೆ ಅಥವಾ ಭಾರತದ ಕೇಂದ್ರೀಯ ಹಜ್ ಸಮಿತಿ ಅಥವಾ ಭಾರತೀಯ ರಾಜ್ಯ ಹಜ್ ಸಮಿತಿಯಂತಹ ಒಂದು ಸಂಸ್ಥೆಗೆ ತಕ್ಷಣವೇ ಮನವಿ ಸಲ್ಲಿಸಲಾದ ಮೊತ್ತವನ್ನು ಬಿಡುಗಡೆ ಮಾಡುವ ಹೊಣೆಗಾರಿಕೆಯನ್ನು ಎಚ್ಎಫ್ಐ ಹೊಂದಿರುತ್ತದೆ.

8. ಏನೇ ಆದರೂ, ಹಜ್ ಅಕೌಂಟ್ ಅನ್ನು ಚಾಲ್ತಿಯಲ್ಲಿಡಲು ರೂಗಳು. 1000/- ಕನಿಷ್ಠ ಕ್ರೆಡಿಟ್ ಉಳಿಕೆಯಲ್ಲಿರುವುದು ಅಗತ್ಯ.

9. ಎಚ್ಎಎಚ್ ಅಥವಾ ಎಚ್ಎಡಿ ಆಯ್ಕೆಯ ಪ್ರಕಾರ, ಎಚ್ಎಎಚ್ ಹಜ್ ಮಾಡಿದ ನಂತರ ಸಹ, ಅವರ ಖಾತೆಗೆ ಮೊತ್ತವನ್ನು ಜಮಾ ಮಾಡುವುದನ್ನು ಮುಂದುವರಿಸಬಹುದು.

10. ಒಂದು ಹಜ್ ಖಾತೆಯಲ್ಲಿ ಎಚ್ಎಎಚ್ ಕ್ರೆಡಿಟ್ ಉಳಿಕೆಯು

(ಎ) ರೂಗಳು. 121,000/- ದಾಟಿದ್ದು, ಎಚ್ಎಫ್ಐನಲ್ಲಿ ತಮ್ಮ ಕ್ರೆಡಿಟ್ ಉಳಿಕೆಯನ್ನು ಬಳಸುತ್ತಿದ್ದು ಇನ್ನೂ ಹಜ್ ಮಾಡದಿರುವ ಎಚ್ಎಎಚ್ ಅಥವಾ

(ಬಿ) ರೂಗಳು 21,000/- ದಾಟಿದ್ದು, ಎಚ್ಎಫ್ಐದಲ್ಲಿನ ತಮ್ಮ ಕ್ರೆಡಿಟ್ ಉಳಿಕೆಯನ್ನು ಬಳಸಿ ಎಚ್ಎಎಚ್ ಹಜ್ ಮಾಡಿದಂತಹ ಸಂದರ್ಭದಲ್ಲಿ, ಎಚ್ಎಎಚ್ ತಮ್ಮ ಇಸ್ಲಾಮಿಕ್-ಕಾನೂನಿಗೆ ಸ್ನೇಹಮಯಿಯಾದ ವೈಯಕ್ತಿಕ ಉದ್ದೇಶಗಳಿಗಾಗಿ ಗರಿಷ್ಠ ಮೊತ್ತ ರೂಗಳು. 20,000/-ವನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ.

ಪ್ರಸ್ತುತದ ಬೆಲೆ ಸೂಚ್ಯಂಕ ಮುಂತಾದ ಅಂಶಗಳನ್ನು ಆಧರಿಸಿ ಝೆಡ್ಎಫ್ಐನ ಬೋರ್ಡ್ ಆಫ್ ಟ್ರಸ್ಟೀಗಳು, ತಮ್ಮ ವಿವೇಚನೆಯ ಮೇರೆಗೆ ಈ ಲೇಖನದಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಬದಲಿಸಬಹುದು.

11. ಮೇಲಿನ ಲೇಖನ 6, 7 ಅಥವಾ 10ರಲ್ಲಿ ಉಲ್ಲೇಖಿಸಲಾದ ಯಾವುದೇ ಸಂದರ್ಭಗಳಲ್ಲಿ ಹಜ್ ಫಂಡ್‌ನಿಂದ ಒಂದು ಮೊತ್ತ ಹೊರಹೋದ ನಂತರ ಎಚ್ಎಎಚ್ ಅಥವಾ ಎಚ್ಎಡಿ ಆ ಮೊತ್ತವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಪುನಃ ಹಿಂದಿರುಗಿ ಜಮಾ ಮಾಡಲು ಬಯಸಿದರೆ, ಯಾವುದೇ ಸಮಯದಲ್ಲಿ ಒಂದು ಅಥವಾ ಹೆಚ್ಚು ಕಂತುಗಳಲ್ಲಿ ಅವರು ಹಾಗೆ ಮಾಡುವುದನ್ನು ಸ್ವಾಗತಿಸಲಾಗುತ್ತದೆ.

12. (ಎ) ಯಾವುದೇ ಸಮಯದಲ್ಲಿ, ಎಚ್ಎಫ್ಐನಲ್ಲಿನ ಗ್ರಾಸ್ ಕ್ರೆಡಿಟ್ ಉಳಿಕೆಯನ್ನು (ಅಂತಹ ಉಳಿಕೆಯ ಐವತ್ತು ಪ್ರತಿಶತಕ್ಕಿಂತ ಹೆಚ್ಚಿನ ಮಟ್ಟಕ್ಕಲ್ಲ) ಬಳಸಿಕೊಳ್ಳಲು ಝೆಡ್ಎಫ್ಐ ಮುಕ್ತವಾಗಿರುತ್ತದೆ

    (i) ಝೆಡ್ಎಫ್ಐ ಮೆಮೊರಾಂಡಮ್ ಆಫ್ ಅಸೋಸಿಯೇಶನ್ ಪ್ರಕಾರ ಬಡವರು ಮತ್ತು ಅಗತ್ಯವುಳ್ಳವರ ಕ್ಷೇಮಾಭಿವೃದ್ಧಿಗಾಗಿ, ಅಥವಾ

    (ii) ಇಸ್ಲಾಮ್ ಪಂಡಿತರು/ಗುರುಜನರೊಂದಿಗೆ ಸಮಾಲೋಚನೆ ಮಾಡಿದ ನಂತರ ಇಸ್ಲಾಮಿಕ್-ಕಾನೂನಿಗೆ ಸ್ನೇಹಮಯಿಯಾದ ಬಂಡವಾಳದ ಉದ್ದೇಶಕ್ಕಾಗಿ.

(ಬಿ) ಅಂತಹ ಬಂಡವಾಳದಿಂದ ಪಡೆದಂತಹ ಅಥವಾ ಉಂಟಾದಂತಹ ಯಾವುದೇ ಹಣಕಾಸು ಲಾಭವನ್ನು ರೆಃಡ್‌ಎಫ್‌ಐ ಮೆಮೊರಾಂಡಮ್ ಆಫ್ ಅಸೋಸಿಯೇಶನ್ ಪ್ರಕಾರ - ಬಡವರು ಮತ್ತು ಅಗತ್ಯವುಳ್ಳವರ ಕ್ಷೇಮಾಭಿವೃದ್ಧಿಗಾಗಿ ಬಳಸಲಾಗುತ್ತದೆ.

(ಸಿ) ಅಂತಹ ಬಂಡವಾಳದಿಂದ ಫಲಿತವಾಗುವ ಯಾವುದೇ ನಷ್ಟವನ್ನು ರೆಃಡ್‌ಎಫ್‌ಐ ತೆಗೆದುಕೊಳ್ಳುತ್ತದೆ / ಅಂತರ್ಗತಗೊಳಿಸಿಕೊಳ್ಳುತ್ತದೆ ಮತ್ತು ಅಂತಹ ಸಂಭವನೀಯ ನಷ್ಟದ ಪ್ರಭಾವ ಯಾವುದೇ ಎಚ್‌ಎಎಚ್‌ಗೆ ಸಾಗಿಸಲಾಗುವುದಿಲ್ಲ, ಇದಕ್ಕೆ ವಿರುದ್ಧವಾಗಿ ಎಚ್‌ಎಎಚ್ ತಾವಾಗಿಯೇ ಆಯ್ಕೆ ಮಾಡಿಕೊಳ್ಳದ ಹೊರತು.

**ಹಜ್ ಫಂಡ್ ಆಫ್ ಇಂಡಿಯಾಟಿಎಮ್**

13. ರೆಃಡ್‌ಎಫ್‌ಐಗೆ ಒಂದು ಅರ್ಜಿ ಸಲ್ಲಿಸಿ ಭದ್ರತೆ ಮತ್ತು ಖಾಸಗಿತನದ ಸಕ್ರಮ ಪ್ರಕ್ರಿಯೆಗಳನ್ನು ಅನುಸರಿಸಿದ ನಂತರ ಪ್ರತಿಯೊಂದು ಎಚ್‌ಎಎಚ್ ಯಾವುದೇ ಸಮಯದಲ್ಲಿ ತಮ್ಮ ಹಜ್ ಖಾತೆಗೆ ಆನ್‌ಲೈನ್ ಪ್ರವೇಶ ಪಡೆಯಬಹುದು.

14. ರೆಃಡ್‌ಎಫ್‌ಐ ಜಾಲತಾಣದಲ್ಲಿ ಐಎಚ್‌ಎಫ್‌ನ ವಿಶಾಲ ಮೇಲ್ಮೈ ನಕ್ಷೆಗಳನ್ನು ಪ್ರದರ್ಶಿಸಲಾಗುವುದು.

15. ಈ ಸೇವೆಯನ್ನು ಹೆಚ್ಚು ಬಳಕೆದಾರರಿಗೆ ಮತ್ತು ಇಸ್ಲಾಮಿಕ್-ಕಾನೂನಿಗೆ ಸ್ನೇಹಮಯಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಸಲಹೆಗಳನ್ನು ಸ್ವಾಗತಿಸಲಾಗುತ್ತದೆ.

[ಮುಕ್ತಾಯ]